**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆ: 35/2024**

**ಸಾಕ್ಷಿಯನ್ನು ದಿಃ 22.07.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸುರೇಶ | ಸಿಡಬ್ಲ್ಯೂ: 1 | ಪಿಡಬ್ಲ್ಯೂ: 1 |
| ತಂದೆಯ ಹೆಸರು | ಕರೀಗೌಡ | | |
| ವಯಸ್ಸು | 48 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಮೈಲಾಂಬೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಚಾಸಾ–2 ಗೊತ್ತು. ಚಾಸಾ–3 ರಿಂದ 5 ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ. ಸಾಕ್ಷಿ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ–1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಶೋಧನಾ ಸಮುಚಿತ ಆಧಾರದಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಾದರಿ ಸೀಲಿನ ನಕಲಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ–3 ಎಂದು, ಸಾಕ್ಷಿ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಅಬಕಾರಿ ಅಧಿಕಾರಿಗಳ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಸದರಿ ಸಹಿಗಳನ್ನು ಸುಮಾರು 2 ವರ್ಷಗಳ ಹಿಂದೆ ನಾನು ಮತ್ತು ಚಾಸಾ–2 ರವರು ಹುಣಸೂರಿನಿಂದ ನಮ್ಮ ಊರಿಗೆ ಸ್ಕೂಟರ್ ನಲ್ಲಿ ಹೋಗುತ್ತಿದ್ದಾಗ ಕಲ್ಕುಣಿಕೆ ಸರ್ಕಲ್ ನಲ್ಲಿ ಅಬಕಾರಿ ಅಧಿಕಾರಿಗಳು ಕೋರಿಕೊಂಡ ಮೇರೆಗೆ ಮೇಲೆ ಹೇಳಿದ ಸಹಿಗಳನ್ನು ಹಾಕಿದ್ದೇನೆ. ಯಾವ ಕಾರಣಕ್ಕಾಗಿ ಸಹಿ ಹಾಕಿದ್ದೀರಿ ಎಂದರೆ ಏನಿಲ್ಲ ಹಾಕಿ ಎಂದು ಅಧಿಕಾರಿಗಳು ಹೇಳಿದರು. ನಾನು ಸಹಿ ಹಾಕುವ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ಇರಲಿಲ್ಲ. ನನ್ನ ಸಮಕ್ಷಮ ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ಈ ಹಿಂದೆ ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ 01.05.2023 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ನಾನು ಹುಣಸೂರು ಟೌನ್ ನಿಂದ ಕೆ.ಆರ್ ನಗರಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ಅಬಕಾರಿ ಅಧಿಕಾರಿಗಳು ವಿಧಾನ ಸಭಾ ಚುನಾವಣಾ ಸಂಬಂಧ ನೀತಿ ಸಂಹಿತೆ ಜಾರಿಯಲ್ಲಿದ್ದ ಹಿನ್ನೆಲೆಯಲ್ಲಿ ಹುಣಸೂರು ಪಟ್ಟಣ ಠಾಣಾ ಸರಹದ್ದು ಮುಕ್ತಾಯ ಎಂಬ ನಾಮಫಲಕ ಇರುವ ಮುಂಭಾಗದ ಸ್ಥಳದಲ್ಲಿ ವಾಹನವನ್ನು ತಪಾಸಣೆ ಮಾಡುತ್ತಿರುವಾಗ ನಾನು ಮತ್ತು ಚಾಸಾ-2 ರವರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ನಮ್ಮನ್ನು ತಡೆದು ನಿಲ್ಲಿಸಿದ್ದು, ಆ ಸಮಯದಲ್ಲಿ ಹುಣಸೂರು ಕಡೆಯಿಂದ ರಾತ್ರಿ ಸುಮಾರು 9-30ರ ಸಮಯದಲ್ಲಿ ಒಬ್ಬ ಸವಾರನು ಮೋಟಾರ್ ಟ್ಯಾಂಕ್ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ಬರುತ್ತಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಆಗ ಅಬಕಾರಿ ಅಧಿಕಾರಿಗಳು ಸದರಿ ವಾಹನವನ್ನು ತಪಾಸಣೆ ನಡೆಸಲು ನನ್ನನ್ನು ಮತ್ತು ಚಾಸಾ-2 ರವರನ್ನು ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡರು ಮತ್ತು ನಮಗೆ ನೋಟಿಸನ್ನು ಜಾರಿ ಮಾಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿಯೇ ವಾಹನವನ್ನು ತಪಾಸಣೆ ನಡೆಸುವ ಸಲುವಾಗಿ ಶೋಧಾನ ಸಮುಚಿತ ಆಧಾರವನ್ನು ತಯಾರಿಸಿ ನನ್ನ ಮತ್ತು ಚಾಸಾ-2 ರವರ ಸಹಿಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ.

ನಂತರ ಅಬಕಾರಿ ಅಧಿಕಾರಿಗಳು ನಮ್ಮ ಸಮಕ್ಷಮ ಸದರಿ ವಾಹನದ ಮೋಟಾರ್ ಟ್ಯಾಂಕ್ ಮೇಲೆ ಇರುವ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಏನಿದೆ ಎಂದು ಕೇಳಿದಾಗ ಸರಿಯಾದ ಉತ್ತರ ಕೊಡದೇ ಸವಾರ ತಡವರಿಸಿದ ಎಂದರೆ ಸರಿಯಲ್ಲ. ಸದರಿ ವಾಹನವನ್ನು ನಮ್ಮ ಸಮಕ್ಷಮ ಶೋಧಿಸಿದಾಗ ಬಿಳಿ ಪ್ಲಾಸ್ಟಿಕ್ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ ಮದ್ಯ ತುಂಬಿದ 50 ಟೆಟ್ರಾ ಪ್ಯಾಕೇಟ್ ಗಳು ಕಂಡು ಬಂತು ಎಂದರೆ ಸರಿಯಲ್ಲ. ಸದರಿ ವಾಹನವನ್ನು ಪರಿಶೀಲಿಸಿದಾಗ ಯಾವುದೇ ಬಿಲ್

ಅಥವಾ ಪರ್ಮಿಟ್ ಕಂಡು ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದ ನೋಂದಣಿ ಸಂಖ್ಯೆ ನೋಡಲಾಗಿ ಕೆಎ-45-ಹೆಚ್-8410ರ ಹಿರೋ ಹೋಂಡಾ ಸ್ಪೆಂಡರ್ ಪ್ಲಸ್ ದ್ವಿಚಕ್ರ ವಾಹನವಾಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಸದರಿ ಸವಾರನನ್ನು ಕೇಳಿದಾಗ ತಾನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಹುಣಸೂರು ಟೌನ್ ನ 5-6 ಬಾರ್ ಗಳಿಂದ ಮದ್ಯವನ್ನು ಖರೀದಿಸಿದ್ದು, ಚುನಾವಣಾ ಸಂದರ್ಭದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಹೊಂದಿ ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದ ಎಂದರೆ ಸರಿಯಲ್ಲ . ಆತನ ಹೆಸರು ವಿಳಾಸ ಕೇಳಲಾಗಿ ಸತೀಶ ಬಿನ್ ಸ್ವಾಮಿಗೌಡ , 36 ವರ್ಷ ಮೈಲಾಂಬೂರು ಗ್ರಾಮ ಎಂದು ತಿಳಿಸಿದ ಎಂದರೆ ಸರಿಯಲ್ಲ. ಯಾವುದೇ ಪರ್ಮಿಟ್ ಇಲ್ಲದೇ ಅಕ್ರಮವಾಗಿ ಮದ್ಯ ದಾಸ್ತಾನು ಹೊಂದಿ ಮದ್ಯವನ್ನು ಸಾಗಾಟ ಮಾಡವುದು ಕಾನೂನು ವಿರುದ್ಧವಾದ ಕಾರಣ ಆರೋಪಿಗೆ ನೋಟಿಸ್ ನೀಡಿ ತನಿಖೆಗೆ ಸಹಕರಿಸುವಂತೆ ಸೂಚಿಸಿ ಆರೋಪಿಗೆ ಕಲಂ 41(ಎ) ಅಡಿಯಲ್ಲಿ ಸ್ಥಳದಲ್ಲಿಯೇ ನೋಟಿಸ್ ಜಾರಿ ಮಾಡಿ, ಸ್ಥಳದಲ್ಲಿಯೇ ಆರೋಪಿಯನ್ನು ಸೂಕ್ತ ಜಾಮೀನಿನ ಮೇಲೆ ಬಿಡಲಾಯಿತು ಎಂದರೆ ಸರಿಯಲ್ಲ. ಸ್ಥಳದಲ್ಲಿ ದೊರೆತ ದ್ವಿಚಕ್ರ ವಾಹನವನ್ನು ಮತ್ತು ಮದ್ಯ ತುಂಬಿದ ಪ್ಲಾಸ್ಟಿಕ್ ಚೀಲ ಸಮೇತ ಇಲಾಖಾ ವಶಕ್ಕೆ ಪಡೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಮದ್ಯದಿಂದ ತಲಾ 90 ಮಿಲಿ ಸಾಮರ್ಥ್ಯದ ಒಟ್ಟು 30 ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ತೆಗೆದು ಒಂದು ಬಿಳಿ ಬಟ್ಟೆಯ ಖಾಲಿ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಸಂಖ್ಯೆ 310 ರಿಂದ ಮುದ್ರೆ ಮಾಡಲಾಯಿತು ಎಂದರೆ ಸರಿಯಲ್ಲ. ನಂತರ ಸಣ್ಣ ಚೀಟಿಯಲ್ಲಿ ಮೊಕದ್ದಮೆಯ ವಿವರವನ್ನು ಬರೆದು ನಮ್ಮ ಮತ್ತು ಅಬಕಾರಿ ಅಧಿಕಾರಿಗಳ ಸಹಿಗಳನ್ನು ಪಡೆದು ಅದಕ್ಕೆ ಅಂಟಿಸಲಾಯಿತು ಎಂದರೆ ಸರಿಯಲ್ಲ. ಉಳಿಕೆ ಮದ್ಯದ ಟೆಟ್ರಾ ಪ್ಯಾಕೇಟ್ ಗಳ ಮತ್ತು ದ್ವಿಚಕ್ರ ವಾಹನದ ಮೇಲೆ ಚೀಟಿಯನ್ನು ಅಂಟಿಸಲಾಯಿತು ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ಮಾದರಿ ಸೀಲಿನ ನಕಲಿ ಚೀಟಿಯನ್ನು ತಯಾರಿಸಿ ಅದಕ್ಕೂ ಸಹ ನಮ್ಮ ಹಾಗೂ ಅಧಿಕಾರಿಗಳ ಸಹಿಯನ್ನು ಪಡೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ರಾತ್ರಿ 9-30 ರಿಂದ 11-00 ಗಂಟೆಯವರೆಗೆ ಚಾಸಾ-2 ರಿಂದ 5

ರವರ ಸಹಿಗಳನ್ನು ಪಡೆದು ತಯಾರಿಸಲಾಯಿತು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-2 ರಂತೆ ಶೋಧನಾ ಸಮುಚಿತ ಆಧಾರಕ್ಕೆ ಮತ್ತು ನಿಪಿ-3ರ ಮಾದರಿ ಸೀಲಿನ ನಕಲಿಗೆ ನನ್ನ ಸಹಿಯನ್ನು ಪಡೆಯಲಾಯಿತು ಎಂದರೆ ಸರಿಯಲ್ಲ. ದಿಃ01.05.2023 ರಂದು ಈ ಮೇಲೆ ಹೇಳಿದಂತೆ ಅಬಕಾರಿ ಅಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿ ಮತ್ತು ನಾನು ಒಂದೇ ಊರಿನವರಾದ ಕಾರಣ ಆರೋಪಿ ಹೇಳಿದಂತೆ ಆತನಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ.ಆರ್.ಎಲ್ ಪರ ಕು. ಎ.ವಿ.ಸಿ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.